"SATYAVADI" Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 27] ಬುಧವಾರ 17—10—45 [ಬಿಡಿ ಪ್ರತಿ 3 ಪೈ

ವಿಜಯ ದಶಮಿ

ಮೈಸೂರು, ಅ 16 — ಇಂದು ಪ ಸಿದ್ಧ ಕಡೆಯ ದಿವಸ. ವಿಜಯ ದಶಮಿ. ಶ್ರೀಮನ್ಮಹಾರಾಜರವರು ಸಂಜೆ ನಾಲ್ಕೂನರೆ ಘಂಟೆಗೆ ಅರಮನೆಯಿಂದ ಅಂಬಾರಿಯಲ್ಲಿ ಕುಳಿತು ಸಕಲ ದಂಡು ಬಿರುದಾವಳಿಗಳೊಡನೆ ಬನ್ನಿಮಂಟಪಕ್ಕೆ ದಯಮಾಡಿಸಿದರು. ಅಲ್ಲಿ ಪೂಜಾದಿಗಳು ಸೈನಿಕರ ಪೆರೇಡುಗಳು ನಡೆದವು. ಅನಂತರ ಅಲ್ಲಿಂದ ಹೊರಟು ರಾತ್ರೆ ಹತ್ತು ಘಂಟೆಗೆ ಅರಮನೆ ಸೇರಿದರು. ಅಕ್ಕಪಕ್ಕಗಳಲ್ಲಿ ಜನರು ಕಿಕ್ಕಿರಿದು ನಿಂತರು. ಪ್ರಭುಗಳ ದರ್ಶನದಿಂದ ಆನಂದಭರಿತರಾದರು. ಜನಸಂದಣಿ ಹೆಚ್ಚಾಗಿ ನೆರೆದಿತ್ತು.

ಪ್ರತಿನಿಧಿ ಸಮಾವೇಶ

ಮೈಸೂರು, ಅ 17

ಐದನೇ ದಿವಸದ ಕಾರ್ಯಕಲಾಪಗಳು ದಿವಾನರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಶ್ನೋತ್ತರಗಳಿಂದ ಸಭೆಯು ಕಾರ್ಯಾರಂಭ ಮಾಡಿತು.

ಶ್ರೀಮಾನ್ ಎಚ್. ಶ್ರೀನಿವಾಸಮೂರ್ತಿಯವರ ಖಾದಿಯ ಮೇಲಿನ ಪ್ರಶ್ನೆಗಳ ಬಗ್ಗೆ ಸರ್ಕಾರ ಉತ್ತರಕೊಡುತ್ತಾ "ಖಾದಿ ಬಟ್ಟೆಯ ಖಾತರಿಗೇ ಕೇಂದ್ರಕ್ಕೆ ನೋಟಿಸ್ ಬೇಕೆಂತಲೂ, ಲೋಕಲ್ ಬಾಡೀಸ್ ಪಾವುಗಡ, ಹೊಸಕೋಟೆಗಳಲ್ಲಿದೆಯೆಂದೂ, ಡೆವಲಪ್‌ಮೆಂಟ್ ಕೇಂದ್ರ ತೆಗೆಯಲ್ಪಡುವುದೆಂದೂ, ಖಾದೀಧಾರಿಗಳನ್ನು ಸರ್ಕಾರ ಏನೂ ಮಾಡವುಲ್ಲನೆಂದೂ ತಿಳಿದ ಎ.

ಸ್ಕೂಲು ಕಟ್ಟಡದ ಮೇಲೆ ಪ್ರಶ್ನೋತ್ತರಾಳಾಗುತ್ತಿದ್ದಾಗ ಕಾಂಗ್ರೆಸ್ ಪಕ್ಷದ ಸದಸ್ಯರೊಬ್ಬರು 'ಸರ್ಕಾರಕ್ಕೆ ಹೋದ ಹಣ ಸ್ಮಶಾನಕ್ಕೆ ಹೋದ ಹೆಣ ಎಂಬ ಪಸ. ಬರವುದಿಲ್ಲವೆಂಬು ಗೊತ್ತಿದೆಯೇ ಸ್ವಾಮಿ, ಎಂದರು. "ವಾಯಿಟ್ ಆಫ್ ಆರ್ಡರ್" ಎಂಬ ಕೂಗೆದ್ದಿತು.

ನಿಮ್ಮ ಮಾತನ್ನು ವಾಪಸುತೆಗೆದು ಕೊಳ್ಳಿ ಎಂದು ದಿವಾನರು ಅನ್ನಲಾಗಿ ತಗೊಂಡೆ ಅಂದರು ಸದಸ್ಯರು.

ಚಾಮರಾಜನಗರ-ಸತ್ಯಮಂಗಲ ರೈಲುರಿಸ್ತೆಯನ್ನು ಹಾಕುವ ಬಗ್ಗೆ ಬಂದಿದ್ದ ಅರಿಕೆಗಳಿಗೆ ಸಂಸ್ಥಾನದ ರೈಲ್ವೆ ಜನರಲ್ ಮೇನೆಜರ್ ಉತ್ತರಕೊಡುತ್ತಾ "ಈ ವಿಷಯ ಮದ್ರಾಸಿಗೂ ಸಂಬಂಧಿಸಿದ್ದು ಅವರೆ ಅವರು ಗಮನಿಸಿಲ್ಲ. ಆದುದರಿಂ ನಮ್ಮ ತಪ್ಪು ಇಲ್ಲ" ಎಂದರು.

ಮಹಮದೀಯರಿಗೆ ಸೆಪರೇಟ್ ಎಲೆಕ್ಟ್ರೋರೇಟ್ ಕೊಡಬೇಕೆಂದು ಆಹಮದ್ ಖಾನ್ ಅರಿಕೆಮಾಡಿಕೊಂಡರು. (ನಾಳೆ ಚರ್ಚೆ ನಡೆಯುವುದು)

ಅಡಿಕೆ ಮೇಲಿನ ಸುಂಕ ಹೋಗಬೇಕೆನ್ನುವ ಠರಾವು ತೀವ್ರವಾಗಿ ಚರ್ಚಿಸಲ್ಪಡುತ್ತಿದೆ.

ಲಾವಲರನ್ನು ಗುಂಡುಹೊಡೆದು ಸಾಯಿಸಿದರು

ಪ್ಯಾರಿಸ್ ಅ 15— ಈದಿನ 12-30 ಕ್ಕೆ ಲಾವೆಲ್ಲರನ್ನು ಗುಂಡು ಹೊಡೆದು ಕೊಂದರು. ಅತನ ಕೋಣೆಗೆ ಮಾಜಿಸ್ಟ್ರೇಟರು ಬೆಳಿಗ್ಗೆ ಹೋಗಿ ಮರಣದಂಡನೆಯನ್ನು ಅನುಭವಿಸಬೇಕೆಂದು ತಿಳಿಸಿದರೆ. ನಂತರ ಲಾವಲ್ಲರು ತನ್ನಲ್ಲಿ ಬಚ್ಚಿಟ್ಟುಕೊಂಡಿದ್ದ ವಿಷವನ್ನು ನುಂಗಿ ಸಂಕಟಪಡುತ್ತಾ ಕೆಳಗೆ ಬಿದ್ದರು. ಡಾಕ್ಟರುಗಳು ಪ್ರಾಣ ಉಳಿಸಲು ತುಂಬಾ ಪ್ರಯತ್ನಪಟ್ಟರು. ವಧಸ್ಥಾನಕ್ಕೆ ಕರೆತಂದಾಗ ತಾವೇ ಗುಂಡು ಹೊಡೆದುಕೊಂಡು ಸಾಯುವೆನೆಂದು ಅವರು ತಿಳಿಸಿದರು. ಆದರೆ ಅನುಮತಿ ದೊರೆಯಲಿಲ್ಲ. ನಂತರ ಗುಂಡು ಹೊಡೆದು ಸಾಯಿಸಲ್ಪಟ್ಟರು.

ಂ ಂ ಂ ಂ

ವೈಸರಾಯರು ರಾವಲ್ಪಿಂಡಿ ದರ್ಬಾರಿನಲ್ಲಿ ಮಾಡಿದ ಭಾಷಣದಲ್ಲಿ ನಿಜವಾದ ಭಾರತೀಯ ಅಧಿಕಾರಿಗಳನ್ನೊಳಗೊಂಡ ಭಾರತೀಯ ಸೈನ್ಯವು ಮುಂದಾಗುವುದೆಂದು ಭವಿಷ್ಯ ನುಡಿದಿರುವರು.

ಂ ಂ ಂ ಂ

ಬಟಾವಿಯಾ ಅ 15— ಇಂಡೋನೇಸಿಯಾ ಪರಿಸ್ಥಿಯಲ್ಲಿ ನೆದರ್‌ಲೆಂಡು ಗವರ್ನರ್ ಜನರಲರು ರಾಜೀನಾಮೆ ಕೊಟ್ಟಿರುವರೆಂದೂ, ಇಂಡೋನೇಸಿಯರ್ ಮುಖಂಡರೊಂದಿಗೆ ಮಾತುಕತೆ ನಡೆಸಲು ಡಚ್ ಸರಕಾರವು ಸಿದ್ಧವಿರುವುದೆಂದೂ ಡಾ || ವರ್ಮಾಕರು ತಿಳಿಸಿರುವರೆಂದೂ ಹೇಳಲಾಗಿದೆ.

ಂ ಂ ಂ ಂ

ಇನ್ನು 6 ತಿಂಗಳಲ್ಲಿ ರಷ್ಯಾ ಮತ್ತು ಫ್ರಾನ್ಸು ಅಣುಬಾಂಬ ತಯಾರಿಕೆಯನ್ನು ಪೂರ್ಣಗೊಳಿಸುತ್ತವೆಂದು ಹೇಳಲಾಗಿದೆ. ಖೈದಿಯಾಗಿ ಹಿಡಿಯಲ್ಪಟ್ಟಿರುವ ಜರ್ಮನ್ ರಸಾಯನ ಶಾಸ್ತ್ರಜ್ಞರನ್ನು ಈ ಕಾರ್ಯಕ್ಕೆ ರಷ್ಯನರು ನೇಮಿಸಿರುವರಂತೆ.

ಂ ಂ ಂ ಂ

ಮಧ್ಯ ಭಾರತದಲ್ಲಿ ಕಾಡಿನಲ್ಲಿ ಅಡಗಿಕೊಂಡಿದ್ದ ಭಾರಿ ಡಕಾಯಿತಿಯವರನ್ನು ಹಿಡಿಯಲು ವಿಮಾನಗಳು ಉಪಯೋಗಿಸಲ್ಪಟ್ಟು, 4 ಮಂದಿ ಸತ್ತರು 13 ಮಂದಿ ಗಾಯಗೊಂಡರು.

ಂ ಂ ಂ ಂ

ಜೈನಾದ ಕೇಂದ್ರ ಸರಕಾರವು ನಾಕತಿಂಗಿಗೆ ಪರ್ಯಾಯಿಸಲ್ಪಟ್ಟಿರುವುದು.

ವಾರ್ತಾತರಂಗ

ಮೈಸೂರು ಸಂಸ್ಥಾನದ ಹಿಂದೂ ವಿಧವಾ ಹಾಲಸಭೆಯ ಕಾರ್ಯಕಾರಿ ಸಮಿತಿಯ ಮೀಟಿಂಗು ತಾ || 21 ನೇ ಭಾನುವಾರ ಬೆಳಿಗ್ಗೆ ಮೈಸೂರಿನಲ್ಲಿ ನಡೆಯುವುದು.

ಂ ಂ

ಮದರಾಸಿಗೆ ಗಾಂಧೀಜಿ ಬಂದಾಗ ಅವರಿಗೆ ನೂಲಿನ ತುಲಾಭಾರ ನಡೆಸಲು ಗಾಂಧೀಜಿ ಭಕ್ತ ಸಂಘದವರು ಯೋಚನೆ ಮಾಡಿದ್ದಾರೆ

ಂ ಂ

ತುರ್ಕಿ ಗಡಿಯಲ್ಲಿ ರಷ್ಯಾ ಸೈನ್ಯ ಶೇಖರವಾಗುತ್ತಿದೆಯೆಂದೂ, ಟರ್ಕಿ ಸೈನ್ಯ ಸಿದ್ಧತೆ ವ್ಯವಸ್ಥೆಯಾಗಿದೆಯೆಂದೂ ವರದಿ. ಡಾರ್ಡಿನಲ್ಸ್ ರಕ್ಷಣಾ ಕೋಟೆಗಳನ್ನು ರಷ್ಯನ್ನರು ಕೇಳುತ್ತಾರೆ. ಟರ್ಕಿ ಕೊಟ್ಟಿಲ್ಲ.

ಂ ಂ

ಇಂಡೋನೇಸಿಯರ್ ಪ್ರಜಾ ಸೇನೆಯು ಡಚ್ಚರ ಮೇಲೆ ಯುದ್ಧ ಸಾರಿದೆ.

ಂ ಂ

ಸಿಂಗಪುರದಲ್ಲಿದ್ದ ಜಪಾನೀ ಸೈನಿಕರನ್ನು ಹತ್ತಿರದಲ್ಲಿರುವ ದ್ವೀಪಗಳಿಗೆ ಕಳುಹಿಸಲಾಗುತ್ತಿದೆ. ಅಲ್ಲಿ ಅವರು ವ್ಯವಸಾಯ ಮಾಡಿ ಜೀವಿಸಲು ಅನುಕೂಲ ಪಡಿಸಲಾಗುತ್ತಿದೆ.

ಂ ಂ

ಸ್ವೀನಿನ ಗದ್ದುಗೆ ಮೇಲೆ ರಾಜರೊಬ್ಬರನ್ನು ಕೂರಿಸಲು ಜ || ಫ್ರಾಂಕೋ ಸಂಧಾನ ನಡೆಸುತ್ತಿರುವನೆಂದು ಹೇಳಲಾಗಿದೆ.

ಂ ಂ

ಮೈಸೂರಿನಲ್ಲಿ ನಿನ್ನೆ ನಡೆದ ಪ್ರಜಾಪಕ್ಷ ಸಮ್ಮೇಳನದಲ್ಲಿ ಅಧ್ಯಕ್ಷರಾಗಿದ್ದ ಅಖಿಲ ಭಾರತ ನಿಮ್ನವರ್ಗ ಫೆಡರೇಷನ್ನಿನ ಅಧ್ಯಕ್ಷರಾದ ರಾವ್ ಬಹದ್ದೂರ್ ಶಿವರಾಜ್‌ರವರು ಮಾಡಿದ ಭಾಷಣದಲ್ಲಿ ಬ್ರಾಹ್ಮಣರ ಮೇಲೆ, ಗಾಂಧೀಜಿ ಮೇಲೆ ಮೈಸೂರು ಕಾಂಗ್ರೆಸ್ ಮೇಲೆ ಟೀಕು ಜೋರಾಗಿದೆ. ಬ್ರಾಹ್ಮಣೇತರರು ಬ್ರಾಹ್ಮಣರೊಡನೆ ಬಹುವಾಗಿ ಹೋರಾಡಬೇಕೆಂದೂ, ಬ್ರಾಹ್ಮಣರ ಹಿಡಿತದಿಂದ ತಪ್ಪಿಸಿಕೊಳ್ಳಲು ಜೀಕಾವರೆ ಹಿಂದುತ್ವವನ್ನೇ ಬಿಡಬೇಕೆಂದೂ, ಮೈಸೂರು ಕಾಂಗ್ರೆಸ್ಸಿಗೆ ಬ್ರಾಹ್ಮಣೇತರರನ್ನು ಗುರಾಣಿಗಿರಿಯಲ್ಲಿಡುವ ಉದ್ದಿಶ್ಯವೆಂದೂ, ಗಾಂಧೀ ತತ್ವ ಬ್ರಾಹ್ಮಣ ತತ್ವ ಸಮನ್ವಯವಾಗಿದೆಯೆಂದೂ ಮುಂತಾಗಿರುವವು.

ಬಟ್ಟೇ ಗೋಳು

ಹುಗ್ಲಿ ಜಿಲ್ಲೆಯ ಚಿನ್ಸುರಾ ಎಂಬಲ್ಲಿಯ ರತನ ಸಾಧುಖಾನನೆಂಬ ಒಬ್ಬ ತರುಣನು ತನಗೆ ಬಟ್ಟೆ ಕೊಂಡುಕೊಳ್ಳಲು ಪರಿಮಿಟ್ ಸಿಕ್ಕಲಿಲ್ಲವೆಂದು ಆತ್ಮಹತ್ಯದ ಪ್ರಯತ್ನ ಮಾಡಿದನು. ಅಲ್ಲಿಯ ಮ್ಯಾಜಿಸ್ಟ್ರೇಟರು ಆವನಿಗೆ ಎಚ್ಚರಿಕೆ ಕೊಟ್ಟು ಬಿಟ್ಟುಬಿಟ್ಟರಂತೆ. ತನ್ನ ತಾಯಿಗೆ ಒಟ್ಟಿ ಇಲ್ಲದ್ದರಿಂದ ಎಷ್ಟು ಪ್ರಯತ್ನಮಾಡಿದರೂ ಅದು ವ್ಯರ್ಥವಾಯಿತೆಂದು ತಿಳಿದು ನಿರಾಶೆಯಾಗಿ ಆತ್ಮಹತ್ಯ ಮಾಡಿಕೊಳ್ಳಲು ನಿರ್ಧರಿಸಿ ಅಫೀಮನ್ನು ತಿಂದು ಒಂದು ಶಾಲೆಯ ಹತ್ತಿರ ಬಿದ್ದಿದ್ದನಂತೆ. ಅವನನ್ನು ಆಸ್ಪತ್ರೆಗೆ ಹಾಕಿ ಗುಣ ಹೊಂದಿಸಿದ ಮೇಲೆ ಅವನನ್ನು ವಿಚಾರಣೆಗೆ ಒಳಪಡಿಸಲಾಗಿದ್ದಿತು.

ಂ ಂ

ಉಚಿತ ವಿದ್ಯಾಭ್ಯಾಸ

ಈ ತಿಂಗಳಿಂದ ಸಿಲೋನಿನಲ್ಲಿ ಎಲ್ಲ ಶಾಲೆಗಳಲ್ಲಿಯೂ ಧರ್ಮಾರ್ಥ ಶಿಕ್ಷಣ ವ್ಯವಹಾರಿಗೆ ಬಂದಿತು. ಪ್ರಥಮ ದರ್ಜೆಯಿಂದ ವಿಶ್ವವಿದ್ಯಾನಿಲಯದವರೆಗೆ ಎಲ್ಲ ಜನರಿಗೂ ಶಿಕ್ಷಣವು ಧರ್ಮಾರ್ಥವಾಗಿ ಕೊಡಲ್ಪಡುವುದು.

ಂ ಂ

ಕಾಗದದ ಸೌಲಭ್ಯ

ಜನರಿಗೆ ಕೊಡುವ ಕಾಗದದ ಪ್ರಮಾಣವನ್ನು ಹಿಂದೂಸ್ಥಾನದ ಸರಕಾರದವರು ಮತ್ತೆ ಹೆಚ್ಚಿಸಿದ್ದಾರೆ.

ಸಿನಿಮಾ ಪ್ರೇಕ್ಷಕನಿಗೆ ಪರಿಹಾರ

ಕಲ್ಕತ್ತಾದ 'ರೂಪಾಳಿ' ಥಿಯೇಟರಿನಲ್ಲಿ ಒಬ್ಬ ಪ್ರೇಕ್ಷಕನ ಮೇಲೆ ಗೋಡೆಯ ಮೇಲೆ ತಗಲುಹಾಕಿದ್ದ ಜಾಹಿರಾತು ಪಟವು ಬಿದ್ದುದ್ದಕ್ಕಾಗಿ ಆತನು ಸಿನಿಮಾ ಕಂಪೆನಿಯ ಮೇಲೆ ಮಾಡಿದ್ದ ವ್ಯವಹಾರದಲ್ಲಿ ಆತನಿಗೆ ಕಂಪೆನಿಯವರು ರೂ. 5450 ಪರಿಹಾರವನ್ನು ಕೊಡುವಂತೆ ಹೈಕೋರ್ಟಿನವರು ಆಜ್ಞೆ ಮಾಡಿದ್ದಾರೆ.

ಂ ಂ

ನೇಪಾಳದ ನಾಣ್ಯಗಳು

ನೇಪಾದಲ್ಲಿ ಹೊಸದಾಗಿ ನೋಟುಗಳು ಪ್ರಾರಂಭವಾಗಿವೆ. ಅವುಗಳ ಮೇಲೆ ನೇಪಾಳ ರಾಜರ ಮುದ್ರೆಯಿದ್ದು 5, 10, 100 ರೂಪಾಯಿಗಳ ನೋಟುಗಳಿರುವುವು.

ಂ ಂ

ನೋಬಲ್ ಬಹುಮಾನ

ಸ್ವೀಡನ್ ಅಕಾಡವಿಯ ಆಟೋ ಹಾನ ಹೆಸರಿನ ಆಟಂಬಾಂಬಿನ ಜರ್ಮನ್ ಸಂಶೋಧಕನಿಗೆ 1944 ರಲ್ಲಿಯ ಕೆಮಿಸ್ಟ್ರಿ (ರಸಾಯನ ಶಾಸ್ತ್ರ) ಬಗ್ಗೆ ಇಟ್ಟ ನೋಬೆಲ್ ಬಹುಮಾನವನ್ನು ಕೊಡುವುದಾಗಿ ಗೊತ್ತುಮಾಡಿದ್ದಾರೆ. ಇವನು ಈಗ ಅಮೇರಿಕಾದಲ್ಲಿ ಇರುವನೆಂದು ಹೇಳಲಾಗಿದೆ.

ರ ಕ್ತ ವೃ ದ್ಧಿ ಗೆ — ಧಾ ತು ಪು ಷ್ಟಿ ಗೆ

ಶ ಕ್ತಿ ಸು ಧಾ

ಸೇವನೆಯೇ ಸುಲಭೋಪಾಯ

[illegible]

ದ ಸ ರಾ ಎ ಗ್ಜಿ ಬಿ ಷ ನ್

ಸ್ಟಾಲ್ ಜಿ 15

ಇಲ್ಲಿ ಏನಿದೆ?—

* ದೋಸೆ ಹಿಟ್ಟು ಅರೆಯುವ ಮಿಷನ್ (ಕರೆಂಟ್ ಸಹಾಯದಿಂದ)
* ಬಿ. ಟಿ. ಹೆಚ್. ಎಲೆಕ್ಟ್ರಿಕ್ ಮೋಟಾರುಗಳು 1/4 H. P. to 40 H. P. : 25 cycles.
* ಇತರ ವಿಷನರಿ ಸಾಮಾನುಗಳು.

MYSORE ELECTRIC & Machinery Co.,
Chickpet — Bangalore City

AT Opera—

2 nd Week

ರಂಜಿತ್, ಟಿ. ಆರ್. ರಾಜಕುಮಾರಿ
ಕೆ. ಎಲ್. ವಿ. ವಸಂತ,
ಕೃಷ್ಣ, ಮಧುರಂ ಪಾತ್ರವಹಿಸಿರುವ

ಶಾಲಿವಾಹನ

(ತಮಿಳು)

Morning Shows
From 11-10-45

Tarzan Triumphs



ಆ ಮ ಶಂ ಕೆ
ಅ ತಿ ಸಾ ರ ಗ ಳಿ ಗೆ
.... ಮಾತ್ರ ....
ಗು ಣ ಕಾ ರಿಯಾ ದ
ಡಿಸೆಂಟಿಸೆಡ್
ಲ
ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತೆ.
— ಸ್ಟಾಕಿಸ್ಟರು —
ರಘುಲಾಲ್ ಅಂಡ್ ಕೊ.
ಟಿ. ಸಿ. ನಟರಾಜ್ ಅಂಡ್ ಕೊ.
— ಹಂಚುವವರು —
ಕಾಂತರಾಜ್ ಅಂಡ್ ಕೊ.
ರವೇ ಬೀದಿ, ಮೈಸೂರು.

At Ranjit
Humayun
6 ನೇ ವಾರ
ರಣಜಿತ್ ಟಾಕೀಸಿನಲ್ಲಿ
.... ಹುಮಾಯೂನ್....
(ಹಿಂದಿ)
ಅಶೋಕ ಕುಮಾರ್, ಚಂದ್ರಮೋಹನ್
ವೀಣಾ, ನಗೀಸ್,, ಷಾ ನವಾಸ್
ಪಾತ್ರವಹಿಸಿರುವರು

ಅರರೆ

ಸಾಮಾಜಿಕ ಭಾವಪರಿಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

For Sale

One second hand Empire Typewriter No 1 F' cape size. Rs. 250/- nett.

Apply to : P. N. Ghose
132 M. S. Paul Choudry Lane
North Bantra Howrah
Post Howrah

1 ಕಸವಿದ್ದಲ್ಲಿ ಪಾಯಿಲೆ.

2 ಕಸವನ್ನೆಲ್ಲಾ ಮುನಿಸಿಪಲ್ ತಿಪ್ಪೆಯಲ್ಲೇ ಹಾಕಿರಿ. ನಿಮ್ಮ ಮಕ್ಕಳನ್ನು ರಸ್ತೆಗಳಲ್ಲಿ [illegible] ಬಿಡಬೇಡಿರಿ.

[ಮೈ. ಪೌರಸಭಾ ಪ್ರಚಾರ ಸಮಿತಿ

TALK A TAMIL

(Pioneer Film-making [illegible]
Local Agent—D. Mahadev
Opera Talkies, Mysore

Edited, Printed and published by M. S. Krishna Rao, at the Satvavadi Press, Chamaraja Agrahar, Mysore